ದಿ.12.06.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಈ ದಿವಸ ನಾನು ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಯಿತು.

1. ದಿಃ 16-12-2020 ರ ಕ್ರಯ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು **ನಿ.ಪಿ-01** ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-01(ಎ)** ಎಂದು ಗುರುತಿಸಲಾಯಿತು. ನಳಿನ, ವರದೆಗೌಡ, ಪೂಜಾ ಮತ್ತು ನವೀನ್ ರವರು ನೊಂದಾಯಿತಾ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ, ಸಾಕ್ಷಿಯು ಅವರ ಸಹಿಗಳನ್ನುನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ-01(ಬಿ ) ಯಿಂದ ನಿಪಿ-01(ಇ)** ವರೆಗೆ ಗುರುತಿಸಲಾಯಿತು. ಸಾಕ್ಷಿದಾರರಾಗಿ ಕುಮಾರ್ ಮತ್ತು ರಂಗಸ್ವಾಮಿ ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ಅವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ-01(ಎಫ್) ಮತ್ತು ನಿಪಿ-01(ಜಿ)** ಎಂದು ಗುರುತಿಸಲಾಯಿತು. ಶ್ರೀಧರ್ ರವರು ಪತ್ರವನ್ನು ಬರೆದಿರುತ್ತಾರೆ, ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ ನಿಪಿ-01(ಹೆಚ್) ಎಂದು ಗುರುತಿಸಲಾಯಿತು.

2. ಇ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ-02 ಎಂದು ಗುರುತಿಸಲಾಯಿತು.

3. ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ-03 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ